ಈಡೇರುತ್ತದೋ ಇಲ್ಲವೋ? ಏಕೆಂದರೆ, ಮಲ್ಲಾರಿಗೌಡ ಪಾಟೀಲ್‌ರವರು ಸಚಿವರಾಗಿದ್ದಂಥ ಕಾಲದಲ್ಲಿ ಒಂದು ಕಂದಕವಾಯಿತು, ಎಸ್. ಎಂ. ಕೃಷ್ಣರವರ ಕಾಲದಲ್ಲಿ ಮತ್ತೊಂದು ಕಂದಕವಾಯಿತು, ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮತ್ತೊಂದು ಕಂದಕವಾಗಿದ್ದಲದೆ ತಮ್ಮ ಕಾಲದಲ್ಲೂ ಕಂದಕವಾಗಿ ಅವು ಭಗ್ನಾವಶೇಷಗಳಾಗಿ ಇತಿಹಾಸ ಹೇಳತಕ್ಕಂಥ ಸಂಗತಿಗಳಾಗಬಾರದು. ಆದುದರಿಂದ, ಕಾಲುವೆ ಕೆಲಸವನ್ನು ಪೂರ್ಣಗೊಳಿಸಿ, ಲಿಕ್ವಡಕ್ಟ್ ಮತ್ತು ಬ್ರಿಡ್ಜ್‌ಗಳ ಕಾಮಗಾರಿಯನ್ನು ಪೂರೈಸಿ ನೀರು ಕೊಡುವ ಕೆಲಸ ಮಾಡಿ, ಕಾಲುವೆ ತೋಡುವುದೇ ಕಾರ್ಯಕ್ರಮವಾಗಬಾರದು ಎನ್ನುವುದು ನನ್ನ ಕಳಕಳಿಯ ಮನವಿ.

ಶ್ರೀ ಕೆ. ಎನ್. ನಾಗೇಗೌಡ : ವಾಟರ್ ಫ್ಲೋಯಿಂಗ್‌ಗೆ ಆ್ಯಕ್ಷನ್ ಪ್ಲಾನ್ ತಯಾರಿಸಿದ್ದು ನೀರು ಕೊಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಆ್ಯಕ್ಷನ್ ಪ್ಲಾನ್ ಪ್ರಕಾರ ನಾವು ಹೋದರೆ 1998ಕ್ಕೆ ಇದು ಮುಗಿಯುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಸ್ವಲ್ಪ ಮುಖ್ಯವಾದುದಾಗಿದ್ದು, ಪ್ರಾಜೆಕ್ಟ್ ಬಗ್ಗೆ ಇರುವುದರಿಂದ ಉತ್ತರ ಕೊಡಲು ಸಂಬಂಧಪಟ್ಟ ಸಚಿವರು ತಯಾರಾಗಿರಬಹುದು.

ಅಧ್ಯಕ್ಷರು : ಪ್ರಶ್ನೆ ಕೇಳಿರುವವರು ಹೊಸ ಸದಸ್ಯರಾಗಿರುವುದರಿಂದ ಇದಕ್ಕೆ ಸಣ್ಣ ನೀರಾವರಿ ಮಂತ್ರಿಗಳು ಉತ್ತರಿಸಬೇಕು. ಈಗ ಒಂದು ಕೆಲಸ ಮಾಡೋಣ, ಮುಂದಿನ ದಿವಸದ ಪ್ರಶ್ನೋತ್ತರ ಪಟ್ಟಿಗೆ ಹಾಕಿಕೊಟ್ಟು ಅವರಿಗೆ ಪ್ರಸ್ತಾಪಿಸಲು ಅವಕಾಶ ಕೊಡೋಣ. ಈಗ ಪ್ರಶ್ನೆಯನ್ನು ವಿತ್‌ಹೆಲ್ಡ್ ಮಾಡಿ ಇದನ್ನು ರೀಪ್ರಿಂಟ್ ಮಾಡಿ ಸಣ್ಣ ನೀರಾವರಿ ಸಚಿವರ ಬಿಸಿನೆಸ್ ಇದ್ದ ದಿವಸ ಹಾಕಿ ಕೊಳ್ಳಲಾಗುವುದು. ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 31ನೇ ಪಟ್ಟಿಯಲ್ಲಿರುವ 68 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳಿಗೆ ಉತ್ತರಗಳನ್ನು ತಮ್ಮ ಅನುಮತಿ ಕೋರಿ ಮಂಡಿಸುತ್ತಿದ್ದೇನೆ.

ಕೊಡಗು ಜಿಲ್ಲೆಗೆ ಅಕ್ಕಿ ಬಿಡುಗಡೆ ಕುರಿತು

2367 - ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ ಎಷ್ಟು ಟನ್ ಅಕ್ಕಿಯನ್ನು ತಿಂಗಳಿಗೆ (ರೇಷನ್‌ಗೆ) ಬಿಡುಗಡೆ ಮಾಡಲಾಗಿದೆ, ಕಳೆದ ತಿಂಗಳು (ಜೂನ್‌ನಲ್ಲಿ) ಉಪ್ಪು ಬಿಡುಗಡೆ ಮಾಡಲಾಗಿದೆ (ತಾಲ್ಲೂಕುವಾರು ವಿವರ ಕೊಡಿ)?

ಅ) ಒಂದು ಹಸಿರು ಕಾರ್ಡ್‌ಗೆ ತಿಂಗಳಿಗೆ ಎಷ್ಟು ಅಕ್ಕಿ, ಸೀಮೆಎಣ್ಣೆ, ಸಕ್ಕರೆ ಮತ್ತು ಗೋಧಿಯನ್ನು ಕೊಡಲಾಗುತ್ತಿದೆ?

ಇ) ಕೆಂಪು ಕಾರ್ಡ್‌ಗೆ ಎಷ್ಟು ಅಕ್ಕಿ, ಸೀಮೆಎಣ್ಣೆ, ಸಕ್ಕರೆ ಮತ್ತು ಗೋಧಿಯನ್ನು ಕೊಡಲಾಗಿದೆ? (ವಿವರ ನೀಡುವುದು)

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ದಿನಾಂಕ 1.6.97ಕ್ಕೆ ಮುಂಚೆ, ಕೊಡಗು ಜಿಲ್ಲೆಗೆ ಪ್ರತಿ ತಿಂಗಳಿಗೆ 2000 ಮೆ.ಟ. ಅಕ್ಕಿಯನ್ನು ಬಿಡುಗಡೆ ಮಾಡಲಾಗುತ್ತಿತ್ತು. ಟಿ.ಪಿ.ಡಿ.ಎಸ್. ಯೋಜನೆ ಜಾರಿಗೆ ಬಂದಾಗಿನಿಂದ, ರಾಜ್ಯಕ್ಕೆ ಹಂಚಿಕೆಯಾಗುತ್ತಿದ್ದ 1,52,260 ಮೆ.ಟ. ಈಗ ಪ್ರತಿ ತಿಂಗಳಿಗೆ 75,000 ಮೆ.ಟ. ಗಳಿಗೆ ಇಳಿದಿದೆ. ಇದರಿಂದಾಗಿ ಜಿಲ್ಲಾವಾರು ಹಂಚಿಕೆಯು ಸಹ ಕಡಿಮೆಯಾಗಿದೆ. ಆದ್ದರಿಂದ, ಕೊಡಗು ಜಿಲ್ಲೆಗೆ, ಈಗಿನ ಹಂಚಿಕೆಯು ಪ್ರತಿ ತಿಂಗಳಿಗೆ 730 ಮೆ.ಟ. ಆಗಿದೆ. ನಕಲಿ ಪಡಿತರ ಚೀಟಿಗಳನ್ನು ಗುರ್ತಿಸಿ ರದ್ದು ಪಡಿಸಿದ ನಂತರ ಉಳಿದಿರುವ ಕಾರ್ಡುಗಳ ಸಂಖ್ಯೆ ಆಧಾರದ ಮೇಲೆ ಈ ಹಂಚಿಕೆಯಾಗಿರುತ್ತದೆ.

ತಾಲ್ಲೂಕುವಾರು ಹಂಚಿಕೆ ಈ ಕೆಳಕಂಡಂತಿದೆ :

ತಾಲ್ಲೂಕು	
ಮಡಿಕೇರಿ	151.3 ಮೆ.ಟನ್
ವಿರಾಜಪೇಟೆ	270.0 ”
ಸೋಮವಾರಪೇಟೆ	307.7 ”
ಒಟ್ಟು	**729.0 “**

ಆ) ಅಕ್ಕಿ - 8 ಕೆ.ಜಿ ಪ್ರತಿ ಕಾರ್ಡಿಗೆ ಪ್ರತಿ ತಿಂಗಳು
ಗೋಧಿ - 2 ಕೆ.ಜಿ ಪ್ರತಿ ಕಾರ್ಡಿಗೆ ಪ್ರತಿ ತಿಂಗಳು
ಸಕ್ಕರೆ - 1½ ರಿಂದ 2 ಕೆ.ಜಿ ಪ್ರತಿ ಕಾರ್ಡಿಗೆ ಪ್ರತಿ ತಿಂಗಳು
ಸೀಮೆಎಣ್ಣೆ - 5 ಲೀ ಪ್ರತಿ ಕಾರ್ಡಿಗೆ ಪ್ರತಿ ತಿಂಗಳು

ಹಸಿರು ಪಡಿತರ ಚೀಟಿದಾರರಿಗೆ ವಿತರಣೆ ಪ್ರಮಾಣದಲ್ಲಿ ವ್ಯತ್ಯಾಸವಾಗಿರುವುದಿಲ್ಲ.

ಇ) ಅಕ್ಕಿ - 4 ಕೆ.ಜಿ ಪ್ರತಿ ತಿಂಗಳು ಪ್ರತಿ ಕಾರ್ಡಿಗೆ
ಗೋಧಿ - ಇಲ್ಲ.
ಸಕ್ಕರೆ - 1½ ಕೆ.ಜಿ.ಯಿಂದ 2 ಕೆ.ಜಿ ವರೆಗೆ ಪ್ರತಿ ತಿಂಗಳು ಪ್ರತಿ ಕಾರ್ಡಿಗೆ
ಸೀಮೆಎಣ್ಣೆ - 5 ಲಿ ಪ್ರತಿ ತಿಂಗಳು ಪ್ರತಿ ಕಾರ್ಡಿಗೆ